"ಅವರ ಮಾವ ಬಂದು ಕರಕೊಂಡು ಹೋದ್ರು."

"ಅವನು ವಾಪಸು ಬರ್ತಾನಾ? ಏನಾದ್ರೂ ಹೇಳಿದ್ನಾ?"

ಸಂಜೀವ್ ಗೋಣು ಅಲ್ಲಾಡಿಸಿ "ಟಾಟಾ ಕೂಡಾ ಹೇಳಲಿಲ್ಲ" ಎಂದ.

ಅವರು ಮತ್ತೆ ವಾಪಸು ಬರಲಿಲ್ಲ. ಒಂದೆರಡು ವಾರಗಳ ನಂತರ ವ್ಯಾನ್ ಒಂದು ಬಂದು, ಅವನ ಮನೆಯ ವಸ್ತುಗಳನ್ನೆಲ್ಲಾ ಖಾಲಿ ಮಾಡಿಕೊಂಡು ಒಯ್ದುಬಿಟ್ಟಿತು.

ಆ ಮನೆ ಖಾಲಿಯಾಗಿಯೇ ಉಳಿಯಿತು. ಕೊನೆಯ ಪಕ್ಷ ನಮ್ಮಪ್ಪ ಆ ಊರಿಂದ ಬೇರೆ ಊರಿಗೆ ವರ್ಗಾವಣೆಯಾಗಿ ಹೊರಡುವ ತನಕ ಖಾಲಿಯಿತ್ತು. ಸಾಮಾನುಗಳನ್ನು ಕಟ್ಟುವಾಗ ರಿಚಿಯಿಂದ ಪಡೆದುಕೊಂಡಿದ್ದ ಕಾಮಿಕ್ಸ್ ಪುಸ್ತಕಗಳ ಕಟ್ಟು ನನಗೆ ಸಿಕ್ಕಿತು. ಅವನ್ನು ಉಳಿಸಿಕೊಳ್ಳಬೇಕೆಂದು ನನಗೆ ಆಸೆಯಿತ್ತು. ಆದರೆ ನಮ್ಮಪ್ಪ ಕೆಲಸಕ್ಕೆ ಬಾರದವು ಎಂದು ಅವನ್ನು ಎಸೆದುಬಿಟ್ಟ.

ಆಮೇಲೆ ನನಗೆ ರಿಚಿಯ ನೆನಪು ಸಂಪೂರ್ಣವಾಗಿ ಮರೆತು ಹೋಗಿತ್ತು. ಆದರೆ ಹಲವು ವರ್ಷಗಳ ನಂತರ, ಇತ್ತೀಚೆಗೆ ಅವನಿಗೊಂದು ಗಾಢವಾದ ಮುತ್ತಿಕ್ಕಿದ ಕನಸು ಬಿದ್ದಾಗ ಮತ್ತೆ ಅವನ ನೆನಪಾಯ್ತು.

## ಮಹೇಶ್ ನಟರಾಜನ್

ಬೆಂಗಳೂರಿನಲ್ಲಿ ನೆಲೆಸಿರುವ ಮಹೇಶ್ ವೃತ್ತಿಯಿಂದ ಆಪ್ತಸಮಾಲೋಚಕರು. ಬರವಣಿಗೆಯನ್ನು ಬಹುಮುಖ್ಯ ಅಭಿವ್ಯಕ್ತಿ ಮಾಧ್ಯಮವೆಂದು ಭಾವಿಸುತ್ತಾರೆ. ಬದುಕಿನಲ್ಲಿ ನಡೆಯುವ ಹಲವು ಘಟನೆಗಳನ್ನು ಧ್ಯಾನಿಸುವಾಗ 'ಅಕಸ್ಮಾತ್ ಹೀಗಾದ್ರೆ ಹೇಗೆ?' ಎನ್ನುವ ವಿಭಿನ್ನ ಆಲೋಚನೆಯಿಂದ ಕತೆ ಹುಟ್ಟಬೇಕು ಮತ್ತು ಜನಮಾನಸದಲ್ಲಿ ಅದು ಬಹುಕಾಲ ಉಳಿಯುವಂತಿರಬೇಕು ಎಂದು ನಂಬುತ್ತಾರೆ. 'ಪಿಂಕ್ ಶೀಪ್' ಎನ್ನುವ ಇವರ ಇಂಗ್ಲಿಷ್ ಕಥಾಸಂಕಲನ ಪ್ರಕಟವಾಗಿದೆ.

## ವಸುಧೇಂದ್ರ

ಸಣ್ಣಕತೆಗಾರ, ಪ್ರಬಂಧಕಾರ, ಅನುವಾದಕ ವಸುಧೇಂದ್ರ 'ಛಂದ ಪುಸ್ತಕ' ಎಂಬ ಪ್ರಕಾಶನ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ಬಳ್ಳಾರಿಯ ಸಂಡೂರು ಅವರ ಊರು. ತಾವು ಮಾಡುತ್ತಿದ್ದ ಸಾಫ್ಟ್‌ವೇರ್ ಕೆಲಸಕ್ಕೆ ವಿದಾಯ ಹೇಳಿ ಪುಸ್ತಕ ಪ್ರಕಟಣೆ, ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಕತೆ, ಪ್ರಬಂಧ, ಅನುವಾದಗಳ ಮಹತ್ವದ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.